ಹರಿಃ ಓಂ

# ವೈಷ್ಣವರು ಕೇದಾರ ಕ್ಷೇತ್ರಕ್ಕೆ ಏಕೆ ಹೋಗಬಾರದು ?

ಇಂತಹ ಪ್ರಶ್ನೆ ತೀರ್ಥಯಾತ್ರೆಗೆ ಹೋಗುವವರು, ಹೋದವರು ಸಾಮಾನ್ಯವಾಗಿ ಕೇಳುತ್ತಾರೆ. ಭಾರತ ದೇಶದಲ್ಲಿ ಶ್ರೀಮನ್ನಾರಾಯಣನ ಅನೇಕ ಮಂದಿರಗಳು ಪುಣ್ಯಕ್ಷೇತ್ರಗಳಿದ್ದಂತೆ ರುದ್ರದೇವರ ಪವಿತ್ರ ಕ್ಷೇತ್ರಗಳೂ ಇರುವುದು. ಅಂತಹ ಕ್ಷೇತ್ರಗಳನ್ನು ದರ್ಶನ ಮಾಡುವುದು ಭಾರತೀಯರ ಸತ್ಸಂಪ್ರದಾಯ ಅನಾದಿ ಕಾಲದಿಂದಲೂ ನಡೆದುಬಂದಿದೆ. ಹಾಗೇನೆ ಶ್ರೀಹರಿ ಪುಣ್ಯಕ್ಷೇತ್ರಗಳಿಗೆ ಹೋದಂತೆ ರುದ್ರದೇವರ ದಿವ್ಯ ಮಂದಿರಗಳಿಗೆ ಹೋಗುವುದುಂಟು. ಇದು ಸುಪ್ರಸಿದ್ಧ. ರುದ್ರದೇವರ ಹನ್ನೆರಡು ಜ್ಯೋತಿರ್ಲಿಂಗಗಳ (ಅನುಬಂಧ ೧ನ್ನು ನೋಡಿ) ಆಲಯ ದರ್ಶನೀಯವು ಆಗಿರುವಾಗ ಕೇದಾರ ಕ್ಷೇತ್ರವೂ ಶಿವನ ಜ್ಯೋತಿರ್ಲಿಂಗಗಳಲ್ಲಿ ಒಂದಾಗಿರುತ್ತೆ. ಹಿಮಾಚಲ ಪ್ರದೇಶದಿಂದ ಆರಂಭಿಸಿ ಕನ್ಯಾಕುಮಾರಿ ದಕ್ಷಿಣ ಸಮುದ್ರದವರೆಗೂ ಅನೇಕ ಶಿವಾಲಯಗಳಿವೆ.

ಇಂತಹ ಶಿವಾಲಯಗಳನ್ನು (ಜ್ಯೋತಿರ್ಲಿಂಗಗಳನ್ನು) ವೈಷ್ಣವರು ದರ್ಶನ ಪಡೆಯುವುದು ಸಂಪ್ರದಾಯವಿದೆ, ನಿಷೇಧವಿಲ್ಲ. ಶ್ರೀಮನ್ಮಧ್ವಾಚಾರ್ಯರು ರುದ್ರದೇವರಿಗೆ ವಿಶಿಷ್ಟ ಸ್ಥಾನ ಕೊಟ್ಟು ಪೂಜಾ ಮಾಡುವುದಾಗಿ ಹೇಳಿರುತ್ತಾರೆ. ತಂತ್ರಸಾರಸಂಗ್ರಹವೆಂಬ ಗ್ರಂಥದಲ್ಲಿ ರುದ್ರ ಧ್ಯಾನ ಮಂತ್ರವನ್ನು ವೈಷ್ಣವರು ಅವಶ್ಯ ಮಾಡಬೇಕೆಂಬ ಸ್ಪಷ್ಟ ಶೃತಿ ಇದೆ.

**ಧ್ಯೇಯಃ ಪಂಚಮುಖೋ ರುದ್ರಃ ಸ್ಫಟಿಕಾಮಲಕಾಂತಿಮಾನ್ ।**
**ವಿದ್ಯುಚ್ಛುಭ್ರಾಸಿತ ರಜಃ ಶ್ಯಾಮಾನ್ಯಸ್ಯಮುಖಾನಿ ಚ**
**ಜಟಾವ ಬದ್ಧೇಂದು ಕಲಃ ಪ್ರಿಯಾಯುಜ್ಞಾಂಗಭೂಷಣಃ ।**
**ಉದ್ದೇಶನತಿಯುಜ್ಞಿಂತ್ರಃ ಸ್ವಯಮೇವಶಿವಸ್ಯತು ।**
**ವರ್ಣೈರೇತೈಸ್ತದಂಗಾನಿ ವಾಮದೇವೋ ಮುನಿಃ ಸ್ಮೃತಃ** (ಶಿವಪಂಚಾಕ್ಷರಿ)
**ಋಷಿರುತ್ತೋ ವಾಮದೇವಃ ಪಂಕ್ತಿಶ್ಚಂದ ಉದಾಹೃತಮ್ ।**
**ಸದಾಶಿವೋ ದೇವತಾಽಸ್ಯ ಮಂತ್ರಸ್ಯ ಪರಿಕೀರ್ತಿತಃ ।**
**ಷಡಂಗಾನಿ ಮನೋರ್ವರ್ಣೈರ್ಜಾತಿಯುಕ್ತಾನಿ ಕಲ್ಪಯೇತ್ ॥**

**ಹರಶಂಭೊ ಮಹಾದೇವ ವಿಶ್ವೇಶಾಮರ ವಲ್ಲಭ ।**
**ಶಿವಶ್ಶಂಕರ ಸರ್ವಾತ್ಮನ್ ನೀಲಕಂಠ ನಮೋಸ್ತುತೇ** (ತಂತ್ರಸಾರಸಂಗ್ರಹ)

ಎಂಬುದಾಗಿ ಪಾರ್ವತೀಪತಿ ರುದ್ರದೇವರ ಪೂಜೆ ತಾರತಮ್ಯೋಪೇತವಾಗಿ ಮಾಡಬೇಕೆಂದು ತಿಳಿಸಲಾಗಿದೆ.

ವಿಶಿಷ್ಟಾದ್ವೈತಿಗಳು (ರಾಮಾನುಜಾಚಾರ್ಯರು) ರುದ್ರದೇವರಿಗೆ ಯಾವ ರೀತಿಯ ಸ್ಥಾನಮಾನ ಕೊಟ್ಟಿಲ್ಲ. ಅಲ್ಲದೆ, ಶಿವಾಲಯ ಹಾಗೂ ಗಣೇಶಾಲಯಕ್ಕೆ ಹೋಗುವುದನ್ನು ನಿಷೇಧಿಸಲಾಗಿದೆ. ಶ್ರೀಮದಾಚಾರ್ಯರು ಮಾತ್ರ ರುದ್ರದೇವರಿಗೆ ತಾರತಮ್ಯದಲ್ಲಿ ಒಂದು

ಪ್ರಮುಖ ಸ್ಥಾನ ಕೊಟ್ಟಿರುತ್ತಾರೆ. ಹೀಗಾಗಿ ಪ್ರಸಿದ್ಧ ಶಿವಾಲಯಗಳೆನಿಸಿದ (ಜ್ಯೋತಿರ್ಲಿಂಗಗಳು) **ಮಲ್ಲಿಕಾರ್ಜುನ** (ಶ್ರೀಶೈಲ – ಭ್ರಮರಾಂಭ), **ಓಂಕಾರೇಶ್ವರ** (ಇಂದೋರ್), ನಾಸಿಕ ಸಮೀಪ ಗೋದಾವರಿ ಉಗಮ ಸ್ಥಾನ **ತ್ರ್ಯಂಬಕೇಶ್ವರ,** ಕಾಶೀ **ವಿಶ್ವನಾಥ** ಹೀಗೆ ಯಾತ್ರಾರ್ಥಿಯಾಗಿ ಅಲ್ಲಲ್ಲಿ ನೆಲಸಿರುವ ರುದ್ರಾಲಯಗಳ ದರ್ಶನ ಪಡೆಯುವುದು ವಾಡಿಕೆ. ಪುಣ್ಯದಾಯಕವೆಂಬ ನಂಬಿಕೆ ಇದೆ. ಹೀಗಿರುವಾಗ ಕೇದಾರೇಶ್ವರನ ಆಲಯವೂ ಜ್ಯೋತಿರ್ಲಿಂಗಗಳಲ್ಲಿ ಒಂದಾಗಿರುವಾಗ ಏಕೆ ಹೋಗಬಾರದು ? ಇದಕ್ಕೆ ಸಮಾಧಾನ ಶ್ರೀಮದಾಚಾರ್ಯರು ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ತಿಳಿಸಿರುತ್ತಾರೆ. ಆದರೆ ದಾಸವರೇಣ್ಯರಾದ ಜಗನ್ನಾಥದಾಸರು ತೀರ್ಥಕ್ಷೇತ್ರ ಸ್ಮರಣೆ ಎಂಬ ಕೃತಿ ಆರನೇ ಕೀರ್ತನೆಯಲ್ಲಿ **"ಕೇದಾರ ಸಗರ ಮಂದಾಕಿನೀ ಕುಸುಮಾವತಿ......."** ಎಂಬಿತ್ಯಾದಿ ಕೇದಾರ ಕ್ಷೇತ್ರವನ್ನು ತಿಳಿಸಿರುತ್ತಾರೆ. ಅಲ್ಲಿಗೆ ಹೋಗಲು ಅಡ್ಡಿಯಿಲ್ಲ ಎನ್ನುವ ಅಭಿಪ್ರಾಯ ತಿಳಿದುಬರುವುದು. ಕೇದಾರವನ್ನು ಸ್ಮರಿಸಿದ್ದಾರೆ.

ಆದರೆ ಶ್ರೀಮದಾಚಾರ್ಯರ ಈ ವಾಕ್ಯಕ್ಕೆ ವಿರೋಧವಿಲ್ಲ. ಕೇದಾರಕ್ಷೇತ್ರವು ವೈಷ್ಣವರಿಗೆ ವರ್ಜ್ಯವೆಂದು ತಿಳಿಸುವ ವಾಕ್ಯಗಳು ಯಾವುವು ಎನ್ನುವುದನ್ನು ತಿಳಿಯುವ ಮುನ್ನ ಜ್ಯೋತಿರ್ಲಿಂಗಗಳೆಂದು ಏಕೆ ಕರೆಯಲಾಗಿದೆ ? ತಿಳಿಯೋಣ. ಶ್ರೀಮದ್ ಭಾಗವತದಲ್ಲಿ ವಿವರವಿದೆ. ಕ್ಷೀರಸಾಗರ ಮಥನವಾಗುತ್ತಿರುವಾಗ ಮೊದಲು ಕಾಲಕೋಟ ವಿಷವು ಹುಟ್ಟಿತು. ದೇವ ದಾನವರು ವಿಷದ ತಾಪ ತಡೆಯಲಾರದೆ ಹೋದರು. ಆಗ ಶ್ರೀಹರಿ ಪ್ರೇರಣೆಯ ಅನುಸಾರ ಜಗತ್ತಿಗೆ ಕ್ಷೇಮ ಬಯಸಿ ರುದ್ರದೇವರು ವಿಷಪಾನ ಮಾಡಿದರು. ಅಂದಿನಿಂದ ರುದ್ರದೇವನನ್ನು ನೀಲಕಂಠ, ವಿಷಕಂಠ, ಶ್ರೀಕಂಠ ಎಂಬ ನಾಮಗಳಿಂದ ಪ್ರಖ್ಯಾತರಾದರು. ಆದರೆ ತಾನು ವಿಷಪಾನ ಮಾಡಿದ ತಾಪ ತಡೆಯಲಾರದೆ ಕೈಲಾಸದಲ್ಲಿ ಹೋಗಿ ನೆಲೆಸಿದರು. ಮಥನ ಪುನಃ ಪ್ರಾರಂಭವಾಗಿ ಶ್ರೀಮಹಾಲಕ್ಷ್ಮೀ ಜನಿಸಿ ಶ್ರೀಹರಿಯನ್ನು ಪತಿಯನ್ನಾಗಿ ಪಡೆದಳು. ಧನ್ವಂತರೀ ರೂಪದಿಂದ ಶ್ರೀವಿಷ್ಣುವು ಅವತರಿಸಿ ಅಮೃತ ಕಳಶವನ್ನು ಹಿಡಿದುಕೊಂಡು ಉದ್ಭವಿಸಿದ. ಅಸುರರು ಕೂಡಲೇ ಅಮೃತ ಪಾತ್ರೆಯನ್ನು ಕಸೆದುಬಿಟ್ಟರು. ದೇವತೆಗಳ ಪ್ರಾರ್ಥನೆಯಂತೆ ಶ್ರೀಶನು ಮೋಹಿನೀ ರೂಪ ತಾಳಿ ತನ್ನ ಲಾವಣ್ಯ ಹಾವ ಭಾವಗಳಿಂದ ದೈತ್ಯರು ಮೋಹವಾಗುವಂತೆ ಮಾಡಿ ಅಮೃತ ಪಾತ್ರೆಯನ್ನು ಪಡೆದು ದೇವತೆಗಳಿಗೆ ಹಂಚಿದ. ದೈತ್ಯರು ವಂಚಿತರಾದರು.

ಹೀಗೆ ಮೋಹಿನೀ ರೂಪ ತಾಳಿದ ವಿಷಯ ರುದ್ರದೇವರಿಗೆ ತಿಳಿಯಿತು. ಆ ಲೋಕ ಸುಂದರ ರೂಪ ತಾನೂ ನೋಡಬೇಕೆಂಬ ಬಯಕೆಯಾಯಿತು. ನಾರಾಯಣನನ್ನು ಪ್ರಾರ್ಥಿಸಿದ. ಶಿವ ನಿನ್ನ ಮನಸ್ಸು ಕೆಡುವುದು, ಆದರೂ ನಿನ್ನ ಪ್ರಾರ್ಥನೆಯ ಮೇರೆಗೆ ತೋರಿಸುತ್ತೇನೆ, ಎಚ್ಚರವಿರಲಿ ಎಂದು ಹೇಳಿ ಅಂತರ್ಧಾನನಾದ.

ನೋಡು ನೋಡುತ್ತಾ ಒಂದು ಉಪವನ ಅದರಲ್ಲಿ ಒಂದು ಜಗನ್ಮೋಹಕ ಸುಂದರಿ ಚೆಂಡಾಡುತ್ತಾ ಹಾವ ಭಾವಗಳಿಂದ ಶಂಕರನ ಮನಸ್ಸೆಳೆದಳು. ರುದ್ರ, ಆ ರೂಪಸಿಯನ್ನು



ಪಡೆಯುವ ಉದ್ದೇಶದಿಂದ ಅವಳಿದ್ದೆಡೆಗೆ ಧಾವಿಸಿದ. ಓಡುತ್ತಾ ಕೊನೆಗೆ ಆ ಸ್ತ್ರೀಯ ರೂಪವನ್ನು ಹಿಡಿದು ಆಲಂಗಿಸಲಾಗಿ ರುದ್ರದೇವರ ವೀರ್ಯವು ಸ್ಖಲನವಾಯಿತು. ತಕ್ಷಣ ಶ್ರೀಹರಿ ತನ್ನ ನಿಜರೂಪವನ್ನು ಪ್ರಕಟಿಸಿದಾಗ ರುದ್ರದೇವರಿಗೆ ಎಚ್ಚರವಾಗಿ ಲಜ್ಜೆಯಿಂದ ತಲೆತಗ್ಗಿಸಿದ. ಇಂತು ವೀರ್ಯವು ಬಿದ್ದ ಸ್ಥಳಗಳಲ್ಲಿ ಬೆಳ್ಳಿ, ಬಂಗಾರ, ಅಲ್ಲದೆ ಹನ್ನೆರಡು ಜಾಗಗಳಲ್ಲಿ ಸ್ಥಾಪಿತವಾಯಿತು. ಇವೇ **ಹನ್ನೆರಡು ರುದ್ರದೇವರ ಜ್ಯೋತಿರ್ಲಿಂಗಗಳೆಂದು ಪ್ರಖ್ಯಾತವಾಗಿವೆ.** ಹೀಗಾಗಿ ಕೇದಾರವೂ ಒಂದು ಜ್ಯೋತಿರ್ಲಿಂಗ. ಶಿವನ ಜ್ಯೋತಿ ವೀರ್ಯ ಜ್ಯೋತಿಯಂತೆ ಬೆಳಗುವುದೆಂದು ಲಿಂಗರೂಪದಲ್ಲಿರುವುದು.

ಆದರೂ ಈ ಕ್ಷೇತ್ರವು ವೈಷ್ಣವರಿಗೆ ನಿಷಿದ್ಧವೆಂದು ಏಕೆ ಹೇಳಲಾಗಿದೆ ? ಇದಕ್ಕೆ ಕಾರಣವೂ ಇರುವುದು. ಶ್ರೀಮದಾನಂದತೀರ್ಥ ಭಗವತ್ಪಾದರು ತಾತ್ಪರ್ಯ ನಿರ್ಣಯದಲ್ಲಿ ತಿಳಿಸುತ್ತಾರೆ. ಲಿಂಗ, ಶೈವ, ಸ್ಕಾಂದಪುರಾಣಗಳಲ್ಲಿ ಶಿವ ಸರ್ವೋತ್ತಮತ್ವವನ್ನು ಅಪಾತತಃ ತಿಳಿಸುತ್ತದೆ.

ಇದರ ಆಧಾರದಿಂದ ಶೈವರು ಪುರಾಣಗಳಲ್ಲಿ ಶಿವಶಕ್ತಿಯ ಉತ್ತಮತೆ ಇರುವುದು ಎಂದು. ಶಿವನು ವಿಷಪಾನ ಮಾಡಿದ್ದು, ತ್ರಿಪುರಾಸುರನನ್ನು ಸಂಹರಿಸಿದ್ದು, ದೇವ ಗಂಗೆಯನ್ನು ಹಿಡಿದು ತನ್ನ ಜಟೆಯಲ್ಲಿ ಬಂಧಿಸಿದ್ದು, ದಕ್ಷಪ್ರಜಾಪತಿಯನ್ನು ಸಂಹರಿಸಿದ್ದು, ಇತ್ಯಾದಿಯಾಗಿ ರುದ್ರದೇವರಿಂದಲೇ ಸಾಧ್ಯವಾಯಿತು. ವಿಷ್ಣುವಿನಿಂದ ಮಾಡಲೂ ಆಗದ ಅದ್ಭುತ ಕಾರ್ಯ ರುದ್ರದೇವರಿಂದಲೇ ಆಯಿತು. ಇವುಗಳಿಂದ ಶಿವನೇ ಸರ್ವೋತ್ತಮನು ಎಂಬುದು ಸಾಬೀತಾಗಿದೆ. ಹೀಗೆ ಪ್ರತಿಪಾದನೆ ಮಾಡಿ ಶಿವ ಪೂಜೆಯನ್ನು ಮಾಡುತ್ತಾ ಹೊಗಳಿದ್ದಾರೆ.

ಇದರ ಪರಿಣಾಮವಾಗಿ ರುದ್ರದೇವರಿಗೆ ಸ್ವಲ್ಪ ಅಹಂಕಾರವು ಅಸುರಾವೇಷವಾಯಿತು. ತನ್ನ ಸಮಾನರಿಲ್ಲವೆಂಬ ಭಾವನೆಯಿಂದ ಶ್ರೀವಿಷ್ಣುವನ್ನು ಧಿಕ್ಕರಿಸಿ ಯುದ್ಧಕ್ಕೆ ಅಣಿಯಾದನು.

ಶ್ರೀಹರಿ ರುದ್ರದೇವರಿಗೆ ಬಂದ ಅಜ್ಞಾನವನ್ನು ತೊಲಗಿಸಲು ತನ್ನ ಗದಾಪ್ರಹಾರ ಮಾಡಿದಾಗ ಶಿವನು ಪರಾಜಿತನಾಗಿ ಮೂರ್ಛೆ ಹೊಂದಿದ. ಆಗ ವ್ಯಾಘ್ರ ರೂಪದಿಂದ ಒಂದು ಗುಹೆಯಲ್ಲಿ ಲಿಂಗ ರೂಪ ತಾಳಿ ಮರೆಯಾದ. **ವ್ಯಾಘ್ರೇಶ್ವರ**ನೆಂಬ ನಾಮವಾಯಿತು.

ಇನ್ನೊಂದು ಪ್ರಸಂಗದಲ್ಲಿ ಹಿಮಾಲಯ ಗೋಮತೀ ತೀರದಲ್ಲಿ ಶ್ರೀನಾರಾಯಣನೊಂದಿಗೆ ಯುದ್ಧ ಮಾಡಿದಾಗ ಇಲ್ಲಿಯೂ ಸೋತು **ಶಾರ್ದೂಲೇಶ್ವರ**ನೆಂಬ ಲಿಂಗದಲ್ಲಿ ಕಾಣಿಸಿಕೊಂಡ.

ಈ ರೀತಿ ಶ್ರೀಮನ್ನಾರಾಯಣನ ಸರ್ವೋತ್ತಮತ್ವವನ್ನು ಧಿಕ್ಕರಿಸಲು ಆಗದೆ ಕೊನೆಗೆ ಬ್ರಾಹ್ಮಣ ವೇಷ ಧಾರಣಮಾಡಿ ವಿಷ್ಣುವಿನೊಂದಿಗೆ ವಾದ ಮಾಡಲೂ ಯುಕ್ತಿಗಳಿಂದ ಸೋಲಿಸಲೂ ಆಗದೆ, ಬಲ, ವೀರ್ಯಗಳಿಂದ ಹಿಂದೆ ಸೋತಂತೆ ಈಗಲೂ ಪರಾಜಿತನಾಗಿ ರುದ್ರದೇವ ಲಜ್ಜಿತನಾದ. ಅವಮಾನವಾಯಿತು. ವಿನಾಕಾರಣ ಶ್ರೀ ಮಹಾವಿಷ್ಣುವಿನ ಆಗ್ರಹಕ್ಕೆ ಗುರಿಯಾದ, ತನ್ನ ಅಧಮತ್ವವನ್ನು ಶ್ರೀನಾರಾಯಣನ ಸರ್ವೋತ್ತಮತ್ವವನ್ನು ಮನಗೊಂಡದ್ದಷ್ಟೇ ಅಲ್ಲದೆ ಶ್ರೀನಾರಾಯಣನ ಹರಿಭಕ್ತಿಗೆ ತನ್ನ ಮುಖ ತೋರಿಸಬಾರದೆಂದು


ಗುಹೆಯಲ್ಲಿ ಹೋಗಿ ಅಡಗಿಕೊಂಡು ಲಿಂಗಧಾರಣ ಮಾಡಿದ. ಆ ಲಿಂಗವೋ ಹಿಂದೆ ಮುಂದಾಗಿ ಇರುವುದು. ಇದನ್ನು ಕೇದಾರವೆನ್ನಲಾಗಿದೆ.


ಕೇದಾರ – ವಾಕ್ಯ ನಿರ್ವಚನೆ Kedara in a particular mountain formed in Himalaya. In this mountain, in a cave Lord Shiva's linga is found. Lingam is in earth, raised to keep out water surrounding Linga of Shiva. (Apte) ಆಲವಾಲ ಗಿಡದ ಬುಡದಲ್ಲಿ ನೀರು ನಿಲ್ಲಲು ಸುತ್ತಲೂ ಕಟ್ಟೆ ಕಟ್ಟಿ ಪಾತಿ ಮಾಡಿದ್ದು. **"ಕೇದಾರುದ್ರೌ ಶಿವೇಕ್ಷೇತ್ರೇ ಭೂಮೆ ಭೇದಾಲವಾಲಯೋಃ"** ಇತಿ ನಿರ್ವಚನಃ. ಅಂದರೆ ರುದ್ರದೇವರು ಗುಹೆಯಲ್ಲಿ ಬಚ್ಚಿಟ್ಟುಕೊಂಡಿರುವನು. ತನ್ನ ಹಿಂಭಾಗ ಪೃಷ್ಠ ಮಾತ್ರ ಕಾಣುವಂತೆ ಆಗಿದೆ. ಇಂತು ಅಡಗಿಕೊಂಡ ಶಿವನನ್ನು ಸದಾಗಮಗಳನ್ನು, ವೇದಗಳನ್ನು ಪಠನೆ ಮಾಡುವ ವೈಷ್ಣವರು ಇಲ್ಲಿಗೆ ಬರಕೂಡದೆಂದು ತಾವೇ ಶಾಪ ಕೊಟ್ಟಿರುತ್ತಾರೆ.

**ಮಯಾ ಕೇದಾರೇ ವಿಪ್ರರೂಪೀ ಜಿತಶ್ಚ ರುದ್ರೋಽವಿಶಲ್ಲಿಂಗಮೇವಾಽಶು ಭೀತಃ ।**
**ತತಃ ಪರಂ ವೇದ ವಿದಾಮಗಮ್ಯತಾ ಶಾಪಂ ಪ್ರಾದಾಚ್ಛಂಕರೋ ವ್ರೀಡಿತೋಽತ್ರ**

ಎಂಬ ಸ್ಕಾಂದದಲ್ಲಿ ಇರುವುದಾಗಿ ಪ್ರಾಮಾಣ್ಯವನ್ನೂ ತೋರಿಸಿ ಶ್ರೀಮದಾಚಾರ್ಯರು ಮ.ಭಾ.ತಾ.ನಿ – ಅ. ೨೦ ಶ್ಲೋ. ೨೪ರಲ್ಲಿ ವೈಷ್ಣವರು ಕೇದಾರಕ್ಕೆ ಸರ್ವಥಾ ಹೋಗಬಾರದೆಂದು ತಿಳಿಸಿರುತ್ತಾರೆ.

ಒಂದು ಮುಖ್ಯ ವಿಷಯ – ಕೇದಾರ ಕ್ಷೇತ್ರದಲ್ಲಿ ರುದ್ರದೇವನು (ಕೇದಾರೇಶ್ವರ) ಲಿಂಗ ರೂಪದಿಂದ ಇದ್ದರೂ ಬಾಕೀ ಶಿವಾಲಯಗಳಲ್ಲಿದ್ದಂತೆ ಇಲ್ಲಿ ಇರುವುದಿಲ್ಲ.




ಸಾಧಾರಣವಾಗಿ ಶಿವಾಲಯಗಳಲ್ಲಿ ಚಿತ್ರ ೧ ರ ರೀತಿ ಲಿಂಗಗಳಿರುವುದು. ಆದರೆ ಕೇದಾರದಲ್ಲಿ ಮಾತ್ರ ಲಿಂಗವು ಚಿತ್ರ ೨ ರಂತೆ ತಿರುಗು ಮರಗಾಗಿ ಇರುವುದಷ್ಟೇ ಅಲ್ಲದೆ ಮುಖವು ಹಿಂದೆ ಇದ್ದು ಲಿಂಗವು ನೀರಿನ ಮಧ್ಯದಲ್ಲಿ ಇರುವುದು. ಹೋದವರಿಗೆ ಲಿಂಗದ ಮುಖ ದರ್ಶನವಾಗದೆ ತದ್ವಿರುದ್ಧವಾಗಿ ಪೃಷ್ಠವು ಕಾಣಿಸುವುದು. ಇದಕ್ಕೆ ಕಾರಣ ಹಿಂದೆ ತಿಳಿಸಲಾಗಿದೆ. ತಸ್ಮಾತ್ ವೈಷ್ಣವರು ಹೋಗುವಂತಿಲ್ಲ. ಆದ್ದರಿಂದಲೇ ಶ್ರೀವಾದಿರಾಜರು ತಮ್ಮ "ತೀರ್ಥಪ್ರಬಂಧ"ದಲ್ಲಿ ಕೇದಾರವನ್ನು ಕುರಿತಾದ ವಿವರಣೆ ಇಲ್ಲ.

ಸಂಗ್ರಹ / ವಿವರಣೆ / ನಿರೂಪಣೆ

**ಪಂ॥ ಪ್ರೊ॥ ಬದರೀನಾಥಾಚಾರ್ಯ ಘೂಳೀ**



## ಅನುಬಂಧ – ೧

### ಭಾರತದಲ್ಲಿ ಶಿವಾಲಯಗಳು

**ಜ್ಯೋತಿರ್ಲಿಂಗಗಳು (೧೨)**

೧. ಕೇದಾರೇಶ್ವರ – ಹಿಮಾಲಯ, ಗೌರಿಕುಂಡದ ಹತ್ತಿರ
೨. ವಿಶ್ವನಾಥ – ವಾರಣಾಸಿ, ಗಂಗಾ ತೀರ
೩. ಮಹಾಕಾಳೇಶ್ವರ – ಅವಂತಿ (ಉಜ್ಜೈನ್) ಕ್ಷಿಪ್ರಾ ನದಿ ತೀರ
೪. ನಾಗೇಶ್ವರ (ಶಾರ್ದೂಲೇಶ್ವರ) – ಗೋಮತಿ, ನೈಮಿಶಾರಣ್ಯ (ದ್ವಾರಕಾನು ಇರಬಹುದು)
೫. ಸೋಮನಾಥೇಶ್ವರ – ವೆರಾವಲ್ ಗುಜರಾತ್ (ಪ. ಸಮುದ್ರ– ಮನ್ಮಾಡ್ ಹತ್ತಿರ)
೬. ವ್ಯಾಘ್ರೇಶ್ವರ – (ಘುಷ್ಮೇಶ್ವರ)
೭. ಭೀಮೇಶ್ವರ – ಪೂಣೆ ಮಹಾರಾಷ್ಟ್ರ
೮. ತ್ರಯಂಬಕೇಶ್ವರ – ನಾಸಿಕ್ ಗೋದಾವರಿ ಉಗಮ
೯. ವೈದ್ಯನಾಥೇಶ್ವರ – ಮಹಾರಾಷ್ಟ್ರ (ಪರ್ಬನಿ ಹತ್ತಿರ)
೧೦. ಓಂಕಾರೇಶ್ವರ – ನರ್ಮದಾ ನದಿ ತೀರ, ಮಧ್ಯಪ್ರದೇಶ
೧೧. ಮಲ್ಲಿಕಾರ್ಜುನೇಶ್ವರ – ಶ್ರೀಶೈಲ ಕೃಷ್ಣಾನದಿ, ಪಾತಾಳ ಕೃಷ್ಣ, ಆಂಧ್ರ ಪ್ರದೇಶ
೧೨. ರಾಮೇಶ್ವರ – ತಮಿಳುನಾಡು ಸಮುದ್ರತೀರ (ರಾಮನಾಡ್ ಹತ್ತಿರ)

**ಇವಲ್ಲದೆ ಕೆಲ ಲಿಂಗಾಲಯಗಳು ಇರುವುದು. ಅವನ್ನು ಸ್ವಯಂವ್ಯಕ್ತವೆನ್ನಲಾಗಿದೆ.**

೧. ಪಶುಪತಿನಾಥೇಶ್ವರ – ನೇಪಾಳ ಖಟ್ಮಂಡು ಗಂಡಕೀ ನದಿ
ಪಶುಪತಿನಾಥನ ಲಿಂಗಕ್ಕೆ ನಾಲ್ಕೂ ದಿಕ್ಕಿನಲ್ಲಿ ಮುಖವಿರುವುದು.
(ಉಡುಪಿಯವರ ಪೂಜೆ)
೨. ವಿರೂಪಾಕ್ಷ – ಹಂಪಿ ತುಂಗಭದ್ರ ನದೀ ತೀರ
ಶ್ರೀರಾಮ ಲಕ್ಷ್ಮಣರು ಇಲ್ಲಿಗೆ ಬಂದಿರುವುದಾಗಿ ರಾಮಾಯಣ ಐತಿಹಾಸಿಕಗಳಲ್ಲಿ ಉಲ್ಲೇಖವಿದೆ.
೩. ಲಿಂಗರಾಜಾಲಯ – ಭುವನೇಶ್ವರ ಒರಿಸ್ಸಾ ರಾಜ್ಯ.
೪. ಅರುಣಾಚಲೇಶ್ವರ – ತಿರುವಣ್ಣಾಮಲೈ ತಮಿಳುನಾಡು – ತೇಜಸ್ಸು ಲಿಂಗ.
೫. ಏಕಾಂಬರೇಶ್ವರ – ಶಿವಕಂಚಿ (ಕಂಚೀಪುರ) ತಮಿಳುನಾಡು.
೬. ಸುಂದರೇಶ್ವರ – ಮಧುರೈ ತಮಿಳುನಾಡು.

**ಇನ್ನು ಪಂಚಭೂತ ಲಿಂಗಗಳು (ಭೂತೇಶ್ವರಾಲಯಗಳು)**

೧. ಕಾಳಹಸ್ತೇಶ್ವರ (ವಾಯುಲಿಂಗ) – ಶ್ರೀಕಾಳಹಸ್ತಿ, ತಿರುಪತಿ ಹತ್ತಿರ
೨. ಜಂಬುಕೇಶ್ವರ (ಅಪ್‌ಲಿಂಗ) – ಶ್ರೀರಂಗಂ
೩. ಚಿದಂಬರೇಶ್ವರ (ಆಕಾಶಲಿಂಗ) – ಚಿದಂಬರಂ

೪. ಪೃಥ್ವಿಲಿಂಗ (ಮಣ್ಣಿನಿಂದ ಲಿಂಗ) – ಆಂಧ್ರದಲ್ಲಿದೆ
೫. ಕುಂಭೇಶ್ವರ (ನೀರಿನ ಲಿಂಗ) – ಕುಂಭಕೋಣ, ತಮಿಳುನಾಡು.

**ಕೆಲ ಮುಖ್ಯವಾದ ಲಿಂಗಗಳು**

೧. ಆತ್ಮಲಿಂಗ – ಗೋಕರ್ಣದಲ್ಲಿರುವುದು
೨. ವೃದ್ಧೇಶ್ವರ – ವೃದ್ಧಾಚಲ, ತಮಿಳುನಾಡು
೩. ಚಂದ್ರಮೌಳೀಶ್ವರ – ಉಡುಪಿಯಲ್ಲಿರುವ ಶಿವಾಲಯ

ಹೀಗೆ ಭಾರತದಲ್ಲಿ ಬಹಳಷ್ಟು ಶಿವಾಲಯಗಳಿರುವುದು.

**ಮುಖ್ಯ ವಿಷಯ :** ಒಂದು ಪುರಾಣದಲ್ಲಿ ಮೇಲೆ ತಿಳಿಸಿದ ರೀತ್ಯ ಹನ್ನೆರಡು ಜ್ಯೋತಿರ್ಲಿಂಗಗಳು ಎಂದು ಉಲ್ಲೇಖವಿದೆ.

ಆದರೆ ಪ್ರಮಾಣಾಂತಗಳಿಂದ ರಾಮೇಶ್ವರದಲ್ಲಿರುವ ರಾಮನಾಥೇಶ್ವರ ಲಿಂಗ ರುದ್ರದೇವರ ಲಿಂಗವಲ್ಲವೆಂದು ತಿಳಿಯಬೇಕು.

ಶ್ರೀರಾಮಚಂದ್ರ ರಾವಣನ ಸಂಹಾರಾ ನಂತರ ರಾಮನಿಗೆ ಬ್ರಹ್ಮಹತ್ಯಾಪಾಪ ಬಂದಿತು. ಕಾರಣ ರಾವಣ ಪೌಲಸ್ತ್ಯ ಅಂದರೆ ಬ್ರಾಹ್ಮಣ ಅಂಥವನನ್ನು **"ಬ್ರಾಹ್ಮಣೋನಹಂತವ್ಯ"** ಎಂದಿರುವಾಗ ರಾಮ ಕೊಂದ, ತತ್ಪರಿಣಾಮವಾಗಿ ಬ್ರಹ್ಮಹತ್ಯಾ ಪಾಪ ಬಂದಿತು. ಇಂತಹ ಪಾಪವನ್ನು ಕಳೆದುಕೊಳ್ಳಲು ಶ್ರೀರಾಮ ಶಿವನ ಲಿಂಗ ಪ್ರತಿಷ್ಠಿಸಿದನೆಂದಿದೆ. ರಾವಣ ಶಿವ ಭಕ್ತ. ಶಿವ ಭಕ್ತನನ್ನು ಸಂಹರಿಸಿದಾಗ ರುದ್ರದೇವರ ಪ್ರೀತಿಗಾಗಿ ಸಮುದ್ರ ತೀರದಲ್ಲಿ ಒಂದು ಶಿವಾಲಯುವನ್ನು ಸ್ಥಾಪಿಸಿದ್ದರಿಂದ ರಾಮೇಶ್ವರವೆನ್ನಲಾಗಿದೆ ಎಂದು ಪ್ರಮಾಣರಹಿತ ಕಟ್ಟುಕಥೆ ಹುಟ್ಟಿದೆ.

(೧) ರಾಮೇಶ್ವರದಲ್ಲಿರುವುದು ಜ್ಯೋತಿರ್ಲಿಂಗವಲ್ಲ.

(೨) ಶ್ರೀರಾಮನಿಗೆ ಬ್ರಹ್ಮತ್ಯಾ ದೋಷ ಬರಲೇ ಇಲ್ಲ. ಏಕೆ ?

ರಾವಣ ಯದ್ಯಪಿ ಪೌಲಸ್ತ್ಯ ವಂಶಜನಾದರೂ ಕಾಮುಕ, ಕ್ರೂರಿ ಮತ್ತು ದುಷ್ಟರಾಕ್ಷಸ.

ಲೋಕಕಂಟಕನು ಯಾರೇ ಆಗಲಿ, ರಾಜನಾದವನು ಅಂಥವನನ್ನು ಸಂಹರಿಸಿದರೆ ಲೋಕಕ್ಷೇಮವಾಗುವುದು. ಒಬ್ಬ ದುರ್ಮಾರ್ಗನ ಸಂಹಾರದಿಂದ ಸಜ್ಜನರಿಗೆ ಕ್ಷೇಮ, ಕಲ್ಯಾಣವಾಗುವುದಾದರೆ ದೋಷವಾಗುವುದಿಲ್ಲ. ಇದೇ ಯುಕ್ತಿಯಿಂದ ಶ್ರೀರಾಮ ಮೊದಲಿಗೆ ತಾಟಕಿಯನ್ನು ಕೊಂದ ಆಗ ಸ್ತ್ರೀಹತ್ಯಾದೋಷ ಬರಬೇಕಿತ್ತು. ಏಕೆ ಬರಲಿಲ್ಲ ಎಂದರೆ ಶ್ರೀರಾಮ ನಾರಾಯಣನ ಅವತಾರ ಸರ್ವಜ್ಞನಿಗೆ ತಿಳಿದಿರಲಿಲ್ಲವೇ ? ವಿಶ್ವಾಮಿತ್ರರು ಹೇಳಿಕೆಯ ಪ್ರಕಾರ ಸಂಹರಿಸಿದ. ಏಕೆ ? ಒಬ್ಬ ದುಷ್ಟ ಸ್ತ್ರೀ ಪರಾಕ್ರಮದಿಂದ ಇಡೀ



ಜನಾಂಗ ಸ್ತ್ರೀಯರಿಗೆ ಕಂಟಕಳಾಗಿದ್ದಳು. ಒಬ್ಬಳ ಹತ್ಯ ಇಂದು ಸ್ತ್ರೀ ಸಮಾಜ, ಜನಾಂಗಕ್ಕೆ ಕ್ಷೇಮ, ಮಂಗಳವಾಗುವುದಾದರೆ ದೋಷವಾಗುವುದಿಲ್ಲ.

ಹಾಗೇನೇ ರಾವಣನಂಥ ದುಷ್ಟ ಜನರು ನಾಶವಾದರೆ ಸಮಸ್ತ ಸಜ್ಜನ ಸಮೂಹಕ್ಕೆ ಕಲ್ಯಾಣವಾಗುವುದು. ಅಂದಮೇಲೆ ಶ್ರೀರಾಮನಿಗೆ (ತತ್ರಾಪಿ ಸಾಕ್ಷಾತ್ ನಾರಾಯಣನಿಗೆ) ಬ್ರಹ್ಮಹತ್ಯ ಬಂದಿತೆಂದು ಹೇಳುವುದು ಅಸಂಬದ್ಧ ಪ್ರಲಾಪ.

ಆದರೆ, ರಾಮೇಶ್ವರದಲ್ಲಿರುವುದು ಶಿವಲಿಂಗ. ಅದನ್ನು ರಾಮನೇ ಪ್ರತಿಷ್ಠಾಪಿಸಿದನೆಂದು ಹೇಳುತ್ತಾರಲ್ಲ ಏನು ಸಮಾಧಾನ ?

**ಉತ್ತರ :** ಶ್ರೀಮದಾಚಾರ್ಯರು ಇಂತಹ ಕುಪ್ರಮಾಣ ಶಂಕಾ ಪರಿಹಾರ ಮಾಡಲು ಹೊರಟಿದ್ದಾರೆ. ಶ್ರೀ ವಾದಿರಾಜ ಸ್ವಾಮಿಗಳೂ ಸಹ ವಿರೋಧ ಪರಿಹಾರ ಮಾಡಿರುವುದನ್ನು ನಾವು ಕಾಣಬಹುದು.

ರಾಮೇಶ್ವರ ಶಬ್ದಕ್ಕೆ **"ರಾಮಾಕೃತ ಪ್ರತಿಷ್ಠಂ"**[೧] **ರಾಮಗೃಹಿತಾರ್ಥತನುಂ**[೨] ಎಂಬುದು ತಿಳಿಸುತ್ತದೆ. ಆದರೆ ಕೆಲವರು **ರಾಮಸ್ಯ ಈಶ್ವರಃ** ಎನ್ನುವುದು ಸರಿಯಲ್ಲ. ಶ್ರೀ ವಾದಿರಾಜರು – ಭಗವಂತನು ಸೃಷ್ಟಿ, ಸ್ಥಿತಿ, ಸಂಹಾರ ಕರ್ತನೆಂದೂ ಪ್ರಳಯ ಕಾಲದಲ್ಲಿ ಕೋಟಿ ಕೋಟಿ ಜೀವರಾಶಿಗಳು ಸಂಹೃತವಾಯಿತು. ಆಗ ಇಷ್ಟೊಂದು ಜನರ ಸಂಹಾರ ಮಾಡಿದ ಪಾಪವನ್ನು[೩] ಕಳೆದುಕೊಳ್ಳಲು, ಶ್ರೀನಾರಾಯಣನು ಪೂಜಿಸಲು ರುದ್ರದೇವರೇ ಇರಲಿಲ್ಲ. ಯಾವ ಶಿವನನ್ನು ಭಜಿಸಿದನೆಂದಾಗ ಶಿವ ಎಲ್ಲಿಂದ ಬಂದ ?

ಇನ್ನು ಶ್ರೀಮನ್ನಾರಾಯಣನ ಪಾದಧೂಳಿಯಿಂದ ಗೌತಮ ಪತ್ನಿ ಅಹಲ್ಯ ಪಾಪ ಪರಿಹಾರ ಮಾಡಿ ಪತಿ ಪಾವನನೆಂದೆನಿಸಿಕೊಂಡ. ರಾಮಚಂದ್ರನಿಗೆ ಹತ್ಯಾದೋಷರೋಪಣೆ ಮಾಡಿದ ಪಾಪಕ್ಕೆ ನಾವೇ ಗುರಿಯಾಗುತ್ತೇವೆ.

ಇನ್ನು ಬ್ರಹ್ಮಹತ್ಯ ದೋಷ ಪರಿಹರಿಸಿಕೊಳ್ಳಲು ರಾಮೇಶ್ವರನನ್ನು ಪ್ರತಿಷ್ಠಿಸಿದನೆಂಬ ವಾದವನ್ನು ಖಂಡಿಸುತ್ತಾ

**ಯಂ ಧ್ಯಾಯನ್ ತಾರಕಬ್ರಹ್ಮಮಂತ್ರಂ ಜಪತಿ ಧೂರ್ಜಟಿಃ**
**ಅಥೋತ್ತಾರಾಯ ಕಾಕುತ್ಸ್ಥಃ ಪೂಜಯಾಮಾಸ ತಂ ಕಿಲ** (ತೀ.ಪ್ರ. ದ.ಪ್ರ. ೨೩)

---

೧. ರಾಮಾಕೃತ ಪ್ರತಿಷ್ಠಂ ಎಂದರೆ ಶ್ರೀರಾಮನಿಂದ ನಿರ್ಮಿತವಾಗಿ ಅದನ್ನು ಅವನೇ ಪ್ರತಿಷ್ಠೆ ಮಾಡಿದನೆಂದಿದೆ. ೨. ಶ್ರೀರಾಮನೇ ಲಿಂಗಾಕೃತಿಯಾದನು ಎಂದಿದೆ. ೩. ನಾರಾಯಣನಿಗೆ ಜನಸಂಹಾರದಿಂದ ಪಾಪವೆಲ್ಲಿರುವುದು ? ಕುಯುಕ್ತಿಯ ಮಾತು.

ಶ್ರೀವಾದಿರಾಜರು ಈ ವಿಷಯವಾಗಿ ಹೀಗೆ ತಿಳಿಸುತ್ತಾರೆ.

ಶ್ರೀರಾಮಚಂದ್ರ ರಾವಣನ ಸಂಹಾರದಿಂದ ಬಂದ ಪಾಪ ಪರಿಹಾರಕ್ಕಾಗಿ ರಾಮೇಶ್ವರನನ್ನು ಪ್ರತಿಷ್ಠಾಪನೆ ಮಾಡಿದ ಎಂದು ಕೆಲವರ ವಾದವನ್ನು ತಿರಸ್ಕರಿಸುತ್ತಾ ಈ ವಾದದಲ್ಲಿ ಹುರುಳಿಲ್ಲ. ಈಶ್ವರ ತನಗೆ ಒದಗಿದ ಬ್ರಹ್ಮಹತ್ಯಾ ಪಾಪವನ್ನು ಕಳೆದುಕೊಳ್ಳಲು ಶ್ರೀಹರಿ ಪಾದೋದಕವಾದ ಗಂಗೆಯನ್ನು ತನ್ನ ಜಟೆಯಲ್ಲಿ ಧಾರಣ ಮಾಡಬೇಕಾಯಿತು.

ಹೀಗೆ ರುದ್ರದೇವರಿಗೆ ತನ್ನ ಬ್ರಹ್ಮಹತ್ಯಾ ದೋಷವನ್ನೇ ಕಳೆದುಕೊಳ್ಳಲಾಗದಿರುವಾಗ (ಅಸಮರ್ಥನಾದಾಗ) ಶ್ರೀರಾಮನಿಗೆ ಒದಗಿದ ಬ್ರಹ್ಮಹತ್ಯ ಪಾಪ ಪರಿಹಾರ ಮಾಡಿದನೆಂಬುದು ಹಾಸ್ಯಾಸ್ಪದ. ಇದನ್ನೇ ವಾದಿರಾಜರು ತಿಳಿಸಿರುತ್ತಾರೆ.

**''ಅನೇನ ರಾವಣವಧಜನ್ಯ ಪಾಪಪರಿಹಾರಾಯ ಶಿವ ಪೂಜಾ ಕೃತೇತ್ಯುಕ್ತಿಃ ಅಜ್ಞೋಕ್ತಿರಿತ್ಯುಕ್ತಂಭವತಿ''**

ಹೀಗೆ ಅಜ್ಞ ಜನರು ಮೋಹಿತರಾಗುವುದಕ್ಕಾಗಿ ಶಿವಪೂಜಾ ಮಾಡಿದನೆಂದು ತಿಳಿಯಬಹುದು.

ಇದನ್ನೇ ಶ್ರೀಮದಾಚಾರ್ಯರು ಸ್ಪಷ್ಟೀಕರಿಸುತ್ತಾ ಶ್ರೀಹರಿ ಕೆಲವು ಸ್ಥಳಗಳಲ್ಲಿ ಶಿವನನ್ನು, ಋಷಿಗಳನ್ನು, ಕೆಲಕಡೆ ದೇವತೆಗಳನ್ನು, ಇನ್ನೂ ಕೆಲವು ಕಡೆ ಮನುಷ್ಯರನ್ನು ಪೂಜಿಸುತ್ತಾನೆ. ಹೊಗಳಿ ಸ್ತುತಿಸುತ್ತಾನೆ. ಅಲ್ಲದೇ, ರುದ್ರಾದಿಗಳಿಂದಲೂ ವರಪಡೆವ ಸಂದರ್ಭಗಳಿವೆ. ಅಂದಾಕ್ಷಣ ಶ್ರೀಮನ್ನಾರಾಯಣನ ಸರ್ವೋತ್ತಮತ್ವಕ್ಕೆ ಬಾಧೆ ಬರುವುದಿಲ್ಲ. ಕೆಲವು ಕಡೆ ದೈತ್ಯರಿಂದಲೂ ವರ ಪಡೆದ ವಿಷಯ ಭಾರತ ಮಾರ್ಕಂಡೇಯ ಪುರಾಣದಲ್ಲಿ ಮಧು, ಕೈಟಭರೆಂಬ ರಾಕ್ಷಸರು ಕಲ್ಪಾದಿಯಲ್ಲಿ ಮಹಾವಿಷ್ಣು ವಟಪತ್ರ ಶಾಯಿಯಾಗಿ ಯೋಗನಿದ್ರೆ ಮಾಡುತ್ತಿರುವಾಗ ಶ್ರೀಹರಿಯ ಕಿವಿಯ ಕೊಳಕ್ಕೆ (ಮಲ)ನಿಂದ ಈ ಇಬ್ಬರು ಜನಿಸಿದರು. ನಾರಾಯಣನ ನಾಭಿಕಮಲದಲ್ಲಿರುವ ಬ್ರಹ್ಮದೇವರನ್ನು ಪೀಡಿಸ ತೊಡಗಿದಾಗ ಬ್ರಹ್ಮದೇವರ ಸ್ತೋತ್ರ ಕೇಳಿ, ಎಚ್ಚರಗೊಂಡ ಮಧು ಕೈಟಭರೊಡನೆ ಯುದ್ಧ ಮಾಡಿದ. ನಾರಾಯಣನ ಯುದ್ಧ ಕೌಶಲವನ್ನು ಮೆಚ್ಚಿ, ಹೇ ನಾರಾಯಣ! ನಿನ್ನ ಸಾಮರ್ಥ್ಯ ಅಗಾಧ. ನಾವು ಸಂತುಷ್ಟರಾಗಿದ್ದೇವೆ. ಬೇಕಾದ ವರ ಬೇಡು ಎಂದರು.

ಶ್ರೀಹರಿ ''ನಿಮ್ಮಿಂದ ವರಪಡೆವ ಅಗತ್ಯವಿಲ್ಲ. ಆದರೂ ನೀವು ಕೇಳೆಂದಿರಿ.'' ನೀವಿಬ್ಬರೂ ನನ್ನಿಂದ ಹತರಾಗಬೇಕೆಂಬುದೇ ನನ್ನ ವರವೆಂದಾಗ ಈ ಇಬ್ಬರು, ನಾವು ಮೋಸ ಹೋದೆವು. ಆಯಿತು. ವರಕೊಡುತ್ತೇವೆ. ಆದರೆ ನಾರಾಯಣ ! ಎಲ್ಲೆಲ್ಲೂ ನೀರು ತುಂಬಿರಬೇಕು. ಆದರೆ ಯಾವ ಸ್ಥಳದಲ್ಲಿ ಜಲವಿರುವುದಿಲ್ಲವೋ ಅಲ್ಲಿ ನಮ್ಮನ್ನು ಸಂಹರಿಸು ಎಂದರು.



ಅಂತೆಯೇ ಶ್ರೀಮನ್ನಾರಾಯಣನು ಅವರಿಬ್ಬರನ್ನೂ ತನ್ನ ತೊಡೆಯ ಮೇಲೆಯೇ ಸಂಹರಿಸಿದ (ಶಿವಪುರಾಣ ೪೪) ಈ ವಿಷಯ ದೇವೀ ಮಹಾತ್ಮ್ಯದಲ್ಲಿ **''ವೃಣೋತ್ಯ ಸುರತೋ ವರಾನ್''** ಎಂದಿದೆ. ಆದ್ದರಿಂದ ಸರ್ವೇಶ್ವರ ಸ್ವತಂತ್ರ, ಪುರಾಣ ಪುರುಷೋತ್ತಮ, ಎಲ್ಲರನ್ನೂ ನಿಯಮನ ಮಾಡುವ ಶ್ರೀನಾರಾಯಣ ದುಷ್ಟ ಜನ ಮೋಹನಾರ್ಥವಾಗಿ ಶಿವ ಮುನಿ ರಾಕ್ಷಸ ಮನುಷ್ಯರಿಗೆ ವಂದಿಸುವಂತೆ ನಟಿಸುತ್ತಾನೆ.

ಈ ವಿವರಣೆಯಿಂದ ಮುಖ್ಯವಾಗಿ ವಿಷ್ಣುಭಕ್ತರು ರಾಮೇಶ್ವರದಲ್ಲಿ ಶ್ರೀರಾಮ ಶಿವಲಿಂಗ ಪ್ರತಿಷ್ಠಾಪನೆ ಮಾಡಲೇ ಇಲ್ಲ. ಅಲ್ಲಿರುವುದು ಲಿಂಗರೂಪಿ ಶ್ರೀರಾಮನೇ ಎಂದು ತಿಳಿಯಬೇಕು.

ಒಂದು ವೇಳೆ ಅದು ಶಿವಲಿಂಗವೆಂದು ತಿಳಿದರೂ ಬಾಧಕವಿಲ್ಲ. ಈಶ್ವರನ ಪ್ರಾರ್ಥನೆಯಂತೆ ರಾಮೇಶ್ವರದಲ್ಲಿ ಶಿವಲಿಂಗವನ್ನು ಸ್ಥಾಪಿಸಿದ್ದು ರಾಮನೇ ಎಂದಾಗ ಮಹದೇವನಿಗೆ ಲೋಕಖ್ಯಾತಿಯಾಗಲಿ ಎಂದೇ ಶ್ರೀರಾಮ ಪ್ರತಿಷ್ಠಿಸಿದನೆಂದು ತಿಳಿಯಬಹುದು.

ನವಪಾಷಾಣ (ಒಂಭತ್ತು ಗ್ರಹಗಳನ್ನು) ವನ್ನೂ ಶ್ರೀರಾಮ ಸ್ಥಾಪಿಸಿದನೆಂದಿದೆ. ಹಾಗೆಂದ ಮಾತ್ರಕ್ಕೆ ನವಗ್ರಹಗಳು ರಾಮನಿಂದ ಪೂಜಿತವಾಗುವುದೆನ್ನುವುದೂ ಸಹ ಅಯುಕ್ತ. ಹಾಗಾದರೆ ಹನ್ನೆರಡನೇ ಜ್ಯೋತಿರ್ಲಿಂಗ ಯಾವುದು ಎನ್ನುವ ಪ್ರಶ್ನೆಗೆ ಹಂಪಿಯಲ್ಲಿರುವ ವಿರೂಪಾಕ್ಷನ ಶಿವಲಿಂಗವೆಂದು ಆಧಾರ ಸಹಿತ ಹೇಳಬಹುದು.

ಶ್ರೀರಾಮ, ಲಕ್ಷ್ಮಣ ಸಮೇತ ಸೀತಾನ್ವೇಷಣ ಮಾಡುತ್ತಾ ಋಷ್ಯಮೂಕ ಪಂಪಾಕ್ಷೇತ್ರಕ್ಕೆ ಬರುತ್ತಾನೆ. ಇಲ್ಲಿಯೇ ಕಿಷ್ಕಿಂಧಾ ಇರುವುದು. ಸುಗ್ರೀವಾ ಅಣ್ಣ ವಾಲಿಯಿಂದ ಸೋತು ಇರುವಾಗ ಹನುಮಂತ ರಾಮ ಲಕ್ಷ್ಮಣರನ್ನೂ ಸಂದರ್ಶಿಸುತ್ತಾನೆ. ಆಗ ಅಲ್ಲಿ ಪಂಪಾ ತಟದಲ್ಲಿ ರುದ್ರದೇವರ ಆಲಯವಿದ್ದಿತು ವಿರೂಪಾಕ್ಷನೆಂಬ ಹೆಸರಿನ ಕ್ಷೇತ್ರ.

ಈ ಕ್ಷೇತ್ರವು ದಕ್ಷಿಣ ಕಾಶಿ ಎಂದು ಕರೆಯಲ್ಪಟ್ಟಿತು. ಕಾಶಿಯಲ್ಲಿ ಬಿಂದೂ ಮಾಧವ ಕ್ಷೇತ್ರಮೂರ್ತಿಯಾದರೆ ಇಲ್ಲಿ ಗುಲಗಂಜೀ ಮಾಧವನ ಆಲಯವು ಸಾಕ್ಷಿಯಾಗಿದೆ. ಹಂಪಿ ವಿರೂಪಾಕ್ಷನ ದರ್ಶನ ಎಲ್ಲರೂ ಅವಶ್ಯ ಮಾಡಬೇಕು ಎಂದಿದೆ.

ಹೀಗಾಗಿ ವೇದವ್ಯಾಸರು, ಆಗಮವೇತ್ತರು – ವೈಷ್ಣವರು ಕೇದಾರ ಕ್ಷೇತ್ರಕ್ಕೆ ಹೋಗಬಾರದೆಂಬ ಸಂಪ್ರದಾಯವಿದೆ ಎಂದಿದ್ದಾರೆ.

ಕೇದಾರವು ಜ್ಯೋತಿರ್ಲಿಂಗವಾಗಿದ್ದರೂ ವರ್ಜಿಯವೆಂದು ತಿಳಿಸಲಾಗಿದೆ. ಹಾಗೇನಾದರೂ ಹೋಗಬೇಕೆಂದಿದ್ದರೆ ಕೇದಾರಕ್ಕೆ ಹೋಗಿ ತತ್ಪಾಪಪರಿಹಾರಕ್ಕಾಗಿ ಬದರೀನಾಥನ ದರ್ಶನ ಅಲಕನಂದಾ ಸ್ನಾನಾದಿಗಳಿಂದ ಪರಿಶುದ್ಧರಾಗಬೇಕು ಎನ್ನುವುದನ್ನು ತಿಳಿಸ ಹೊರಟ ಈ ಲೇಖನ.

**ವಿಶೇಷಾಂಶ :** ಆದರೂ ವೈಷ್ಣವರು ಎಲ್ಲಿ ಶಿವಾಲಯಗಳು ಮಾತ್ರವಿರುವುದೋ ಅಂತಹ ಆಲಯಕ್ಕೆ ಹೋಗಬಾರದು. ಕಾರಣ ಶಿಲ್ಪಶಾಸ್ತ್ರ ಪ್ರಕಾರದಿಂದಲೂ ಶೈವಾಗಮ, ವೈಷ್ಣವಾಗಮಗಳಲ್ಲಿ ತಿಳಿಸಿದಂತೆ ಶಿವಾಲಯ ಲಿಂಗಗಳಿದ್ದ ಆಲಯಗಳ ಅತಿ ಹತ್ತಿರ ಶ್ರೀನಾರಾಯಣನ ಆಲಯವೂ ಇರಬೇಕು. ಆಗಮಾತ್ರ ಪವಿತ್ರ ಕ್ಷೇತ್ರವೆನಿಸುವುದು. ಉದಾಹರಣೆಗಾಗಿ ಕೆಲವನ್ನು ಮಾತ್ರ ತಿಳಿಸಲಾಗಿದೆ.

೧. ಖಟ್ಮಂಡು (ನೇಪಾಳ) ಪಶುಪತಿನಾಥನ ಆಲಯದ ಹತ್ತಿರ ಸ್ವಯಂಭೂವೆಂಬ ಶಯನರೂಪಿ ಶೇಷಶಾಯಿ ಮಂದಿರವಿದೆ.

೨. ಕಾಶೀ ವಿಶ್ವನಾಥನ ಆಲಯದ ಹತ್ತಿರ ಬಿಂಧೂ ಮಾಧವನ ಆಲಯ. ವಿಶ್ವನಾಥನು ಸದಾ ರಾಮಧ್ಯಾನ ನಿರತನಾಗಿರುತ್ತಾನೆಂದು ಕಾಶೀ ಖಂಡದಲ್ಲಿ ತಿಳಿಸಲಾಗಿದೆ. ಹತ್ತಿರ ಚಕ್ರತೀರ್ಥವು ಇರುವುದು.

೩. ಮಹಾಬಲೇಶ್ವರ (ಉಜ್ಜೈನ್) ಅವಂತಿ ಹತ್ತಿರ ಶ್ರೀಕೃಷ್ಣ ಬಲರಾಮರ ಸಾಂದೀಪಿನಿ ಮುನಿಗಳಲ್ಲಿ ವಿದ್ಯಾಭ್ಯಾಸ ಮಾಡಿದ ಸ್ಥಳ.

೪. ಸೋಮನಾಥೇಶ್ವರ – ಪಶ್ಚಿಮ ತೀರ ಗುಜರಾತ್ ಪ್ರಭಾಸ ಕ್ಷೇತ್ರವಿದೆ. ಇಲ್ಲಿಯೇ ಶ್ರೀಕೃಷ್ಣ ಪರಂಧಾಮಕ್ಕೆ ತೆರಳಿದ ಸ್ಥಳ.

೫. ಭೀಮೇಶ್ವರ – ಆಂಧ್ರ ಭದ್ರಾಚಲ ರಾಮದೇವಾಲಯ ಗೋದಾವರಿ

೬. ತ್ರಯಂಬಕೇಶ್ವರ – ಗೋದಾವರಿ ಉಗಮ ಸ್ಥಾನ. ನಾಸಿಕ್ ಹತ್ತಿರ ಒಂದು ಪರ್ವತ ಶಿಖರದಿಂದ ಶ್ರೀಹರಿ ಪಾದದಿಂದ ಹರಿದು ಬರುವುದನ್ನು ಇಂದಿಗೂ ನೋಡಬಹುದು. ಪಂಚವಟಿ ಇಲ್ಲಿ ಕಾಲಾ ರಾಮಾಲಯವಿದೆ.

೭. ಜಂಬುಕೇಶ್ವರ – ಶ್ರೀರಂಗನಾಥನ ಹತ್ತಿರ.

೮. ಚಿದಂಬರಂದಲ್ಲಿ ನಟರಾಜನ ಎದುರು ವೆಂಕಟೇಶನ ಆಲಯವಿದೆ.

೯. ಏಕಾಂಬರೇಶ್ವರ – ಶಿವ ಕಂಚಿಯಲ್ಲಿ ಇದ್ದರೆ ವಿಷ್ಣುಕಂಚಿಯಲ್ಲಿ ವರದರಾಜಸ್ವಾಮಿ ಆಲಯ.

೧೦. ವಿರೂಪಾಕ್ಷ ಹಂಪಿಯಲ್ಲಿ ಆಲಯದ ಉತ್ತರದಲ್ಲಿ ಗುಲಗಂಜಿ ಮಾಧವನ ಆಲಯವಿದೆ.

೧೧. ಚಂದ್ರಮೌಳೀಶ್ವರ – ಉಡುಪಿಯಲ್ಲಿ ಶಿವಾಲಯ ಪಕ್ಕದಲ್ಲಿ ಅನಂತೇಶ್ವರ ನಾರಾಯಣನ ಆಲಯವಿದೆ. ಹತ್ತಿರ ಶ್ರೀಕೃಷ್ಣನ ಮಂದಿರವಿದೆ.

ಹೀಗೆ ವಿಷ್ಣುಮೂರ್ತಿ ದೇವಾಲಯಗಳಿಲ್ಲದ ಶಿವಾಲಯವನ್ನು ದರ್ಶನ ಮಾಡಬಾರದು. ಹಾಗೆ ಮಾಡಿದರೆ ಸ್ಮಶಾನ ದರ್ಶನವಾದಂತೆ ಎಂದು ತಿಳಿಯಬೇಕು. ಕಾರಣ ಮಹಾರುದ್ರದೇವರು ಪರಮ ವೈಷ್ಣವರು, ವಿಷ್ಣುಭಕ್ತರು. ಶ್ರೀ ಕೃಷ್ಣಸ್ತೋತ್ರವನ್ನು ಪಾರ್ವತಿಗೆ ಉಪದೇಶ ಮಾಡಿದ ಸ್ತೋತ್ರವಿದೆ.

ಸಂಗ್ರಹ / ಶೋಧನೆ / ವಿವರಣೆ

01-05-2010

**ಪಂ॥ ಪ್ರೊ॥ ಬದರೀನಾಥಾಚಾರ್ಯ ಘೂಳೀ**

**ಬೆಂಗಳೂರು**